ವಿಜಯವಾಣಿ ನಂ. 1

### ಕುಲಪತಿ ಕೆ.ಬಿ. ಗುಡಸಿ ಅನಿಸಿಕೆ | ಡಾ. ಗೋರಬಾಳ ಪ್ರತಿಷ್ಠಾನ-ಕವಿವಿ ಒಡಂಬಡಿಕೆ

# ಸಮಾಜಕ್ಕೆ ಮಾದರಿಯಾಗುವ ಗುಣ ಇರಲಿ

■ ವಿಜಯವಾಣಿ ಸುದ್ದಿಜಾಲ ಧಾರವಾಡ

ನಿವೃತ್ತಿ ನಂತರವೂ ಒಬ್ಬ ಶಿಕ್ಷಕ ತನ್ನ ಶಿಕ್ಷಣ ಸಂಸ್ಥೆಗೆ ಏನಾದರೂ ಮಾಡಬೇಕು ಎಂಬ ತುಡಿತ ಮತ್ತು ಆಸಕ್ತಿ ಇದ್ದಾಗ ಮಾತ್ರ ಆ ಸಂಸ್ಥೆ ಹೆಮ್ಮರವಾಗಿ ಬೆಳೆಯಲು ಸಾಧ್ಯ ಎಂದು ಕವಿವಿ ಕುಲಪತಿ ಪ್ರೊ. ಕೆ.ಬಿ. ಗುಡಸಿ ಅಭಿಪ್ರಾಯಪಟ್ಟರು.

ನಗರದ ಕವಿವಿ ಸಿಂಡಿಕೇಟ್ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಡಾ.ಎಂ. ಆರ್. ಗೋರಬಾಳ ಪ್ರತಿಷ್ಠಾನ ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಭೌತಶಾಸ್ತ್ರ ಅಧ್ಯಯನ ವಿಭಾಗ ಮಧ್ಯೆ ಶೈಕ್ಷಣಿಕ ಚಟುವಟಿಕೆ ಒಡಂಬಡಿಕೆ ಮಾಡಿಕೊಂಡು ಅವರು ಮಾತನಾಡಿದರು.

ಶಿಕ್ಷಕನ ನಿಜವಾದ ಗುಣ ಬೋಧನೆ ಮತ್ತು ಸಂಶೋಧನೆ. ಭೌತಶಾಸ್ತ್ರ ವಿಭಾಗದಲ್ಲಿ ಶೈಕ್ಷಣಿಕ, ಸಂಶೋಧನಾ ಚಟುವಟಿಕೆಗಾಗಿ ಗೋರಬಾಳ ಪ್ರತಿಷ್ಠಾನ ನೀಡುವ ನಿಧಿ ಬಳಸಲಾಗುವುದು ಎಂದರು.

ಗೋರಬಾಳ ಪ್ರತಿಷ್ಠಾನದ ಅಧ್ಯಕ್ಷ ರಮೇಶ ಗೋರಬಾಳ ಮಾತನಾಡಿ, ಪ್ರತಿಷ್ಠಾನದ 50 ಲಕ್ಷ ರೂ. ಠೇವಣಿಯಿಂದ ಬರುವ ಬಡ್ಡಿ ಹಣದಲ್ಲಿ ಪ್ರತಿವರ್ಷ ಪ್ರತಿಭಾವಂತ ಭೌತಶಾಸ್ತ್ರ ಸಂಶೋಧನಾ ವಿದ್ಯಾರ್ಥಿಗೆ ಶಿಷ್ಯವೇತನ, ಭೌತಶಾಸ್ತ್ರ ವಿಭಾಗದ ಇಬ್ಬರು ಅತಿಥಿ ಉಪನ್ಯಾಸಕರಿಗೆ ಉತ್ತೇಜನ ನೀಡುವ ಉದ್ದೇಶವಿದೆ ಎಂದರು.

ಒಪ್ಪಂದಕ್ಕೆ ಸಹಿ ಹಾಕಿದ ಕವಿವಿ ಕುಲಸಚಿವ ಯಶಪಾಲ್ ಕ್ಷೀರಸಾಗರ ಮಾತನಾಡಿ, ಶೈಕ್ಷಣಿಕ ಒಪ್ಪಂದಗಳು ವಿವಿಗೆ ಚೈತನ್ಯ ನೀಡುವುದಲ್ಲದೆ, ಒಳ್ಳೆಯ ಶೈಕ್ಷಣಿಕ ವಾತಾವರಣ ನಿರ್ಮಿಸಲು ಸಾಧ್ಯ ಎಂದರು.

ಕವಿವಿ ಭೌತಶಾಸ್ತ್ರ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಡಾ. ಎಂ.ಆರ್. ಗೋರಬಾಳ ಮಾತನಾಡಿದರು. ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಆರ್.ಎಫ್. ಭಜಂತ್ರಿ, ಡಾ. ಬಿ.ಬಸವನಗೌಡ, ಡಾ. ಎಂ. ಡೇವಿಡ್, ಡಾ. ಬಿ.ಎಚ್. ನಾಗೂರ, ಶೋಭಾ ಗೋರಬಾಳ, ಡಿ.ಎಸ್. ಪಾಟೀಲ, ನೇತ್ರಾ ಗೋರಬಾಳ, ಇತರರು ಇದ್ದರು.




**ಧಾರವಾಡ ಕವಿವಿ ಭೌತಶಾಸ್ತ್ರ ಅಧ್ಯಯನ ವಿಭಾಗ ಹಾಗೂ ಡಾ. ಎಂ.ಆರ್. ಗೋರಬಾಳ ಪ್ರತಿಷ್ಠಾನ ನಡುವೆ ಶೈಕ್ಷಣಿಕ ಚಟುವಟಿಕೆ ಒಡಂಬಡಿಕೆ ಮಾಡಿಕೊಳ್ಳಲಾಯಿತು. ಕುಲಪತಿ ಪ್ರೊ. ಕೆ.ಬಿ. ಗುಡಸಿ, ಕುಲಸಚಿವ ಯಶಪಾಲ್ ಕ್ಷೀರಸಾಗರ, ರಮೇಶ ಗೋರಬಾಳ, ಡಾ. ಎಂ.ಆರ್. ಗೋರಬಾಳ, ಡಾ. ಆರ್.ಎಫ್. ಭಜಂತ್ರಿ, ಡಾ. ಬಿ.ಬಸವನಗೌಡ, ಶೋಭಾ ಗೋರಬಾಳ, ನೇತ್ರಾ ಗೋರಬಾಳ, ಇತರರು ಇದ್ದರು.**

Hubli Edition
Jan 19, 2023 Page No. 7
Powered by : eReleGo.com

# ಒಬ್ಬ ಶಿಕ್ಷಕನ ನಿಜವಾದ ಗುಣಗಳು ಬೋಧನೆ ಮತ್ತು ಸಂಶೋಧನೆ ಆಗಿವೆ: ಕುಲಪತಿ ಪ್ರೊ. ಕೆ.ಬಿ ಗುಡಸಿ



**ಉದಯಕಾಲ ನ್ಯೂಸ್**

**ಧಾರವಾಡ:** ಶಿಕ್ಷಕನ ನಿವೃತ್ತಿಯ ನಂತರವೂ ಒಬ್ಬ ಶಿಕ್ಷಕ ತನ್ನ ಶಿಕ್ಷಣ ಸಂಸ್ಥೆಗೆ ಏನಾದರೂ ಮಾಡಬೇಕು ಎಂಬ ತುಡಿತ ಮತ್ತು ಆಸಕ್ತಿ ಇದ್ದಾಗ ಮಾತ್ರ, ಆ ಶಿಕ್ಷಣ ಸಂಸ್ಥೆ ಹೆಮ್ಮರವಾಗಿ ಬೆಳೆಯಲು ಸಾಧ್ಯ ಎಂದು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಕೆ.ಬಿ ಗುಡಸಿ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಡಾ. ಎಂ. ಆರ್. ಗೋರಬಾಳ ಫೌಂಡೇಶನ್ ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಭೌತಶಾಸ್ತ್ರ ಅಧ್ಯಯನ ವಿಭಾಗದ ಮಧ್ಯ ಶೈಕ್ಷಣಿಕ ಚಟುವಟಿಕೆಯ ಒಡಂಬಡಿಕೆ ಕಾರ್ಯಕ್ರಮನ್ನು ಉದ್ದೇಶಿಸಿ ಮಾತನಾಡಿದರು. ಒಬ್ಬ ಶಿಕ್ಷಕ ನಿಜವಾದ ಗುಣಗಳು ಬೊಧನೆ ಮತ್ತು ಸಂಶೋಧನೆ ಆಗಿವೆ. ವಿಶ್ವವಿದ್ಯಾಲಯದಿಂದ ಅನೇಕ ಪ್ರಾಧ್ಯಾಪಕರು ನಿವೃತ್ತಿ ಆದ ನಂತರ ಸಮಾಜಕ್ಕೆ ಮತ್ತು ತಾನು ಸಲ್ಲಿಸಿದ ವಿಶ್ವವಿದ್ಯಾಲಯಕ್ಕೆ ಏನನ್ನಾದರೂ ನೀಡಬೇಕು ಎಂಬ ಭಾವನೆ ಹೊಂದಬೇಕು, ಆಗ ಮಾತ್ರ ಒಬ್ಬ ಪರಿಪೂರ್ಣವಾದ ಶಿಕ್ಷಕನಾಗಲು ಸಾಧ್ಯ ಎಂದ ಅವರು ಡಾ. ಡಿ.ಸಿ.ಪಾವಟೇ ತರಹ ಡಾ. ಎಂ.ಆರ್. ಗೋರಬಾಳ ಫೌಂಡೇಶನ್ ನಿಂದ ನೀಡುವ ನಿಯನ್ನು ಭೌತಶಾಸ್ತ್ರ ವಿಭಾಗದಲ್ಲಿ ಶೈಕ್ಷಣಿಕ ಸಂಶೋಧನಾ ಚಟುವಟಿಕೆಗಳಿಗೆ ಆದ್ಯತೆ ನೀಡಲಾಗುವದು ಎಂದರು.

ಡಾ. ಎಂ.ಆರ್. ಗೋರಬಾಳ ಫೌಂಡೇಶನ್ ಅಧ್ಯಕ್ಷ ರಮೇಶ ಗೋರಬಾಳ ಮಾತನಾಡಿ, ಗೋರಬಾಳ ಫೌಂಡೇಶನ್ ವತಯಿಂದ 50 ಲಕ್ಷ ರೂಪಾಯಿಗಳನ್ನು ಠೇವಣಿ ಇರಿಸಿ ಅದರಿಂದ ಬರುವ ಬಡ್ಡಿ ಹಣವನ್ನು ಪ್ರತಿ ವರ್ಷ ಪ್ರತಿಭಾವಂತ ಭೌತಶಾಸ್ತ್ರ ಸಂಶೋಧನಾ ವಿದ್ಯಾರ್ಥಿ ಶಿಷ್ಯವೇತನ ನೀಡುವದು ಮತ್ತು ಭೌತಶಾಸ್ತ್ರ ವಿಭಾಗದ ಇಬ್ಬರು ಪ್ರತಿಭಾವಂತ ಅತಿಥಿ ಉಪನ್ಯಾಸಕರಿಗೆ ಉತ್ತೇಜನ ನೀಡುವ ಸಲುವಾಗಿ ಗೌರವ ಧನವನ್ನು ನೀಡುವದು ಈ ಫೌಂಡೇಶನನ ಮುಖ್ಯ ಉದ್ದೇಶವಾಗಿದೆ ಎಂದ ಅವರು ಮುಂದಿನ ದಿನಗಳಲ್ಲಿ ಡಾ. ಎಂ. ಆರ್ ಗೋರಬಾಳ ಫೌಂಡೇಶನ್ 50 ಲಕ್ಷ ದಿಂದ 1 ಕೋಟಿಯವರಗೆ ಈ ಠೇವಣಿಯನ್ನು ಹೆಚ್ಚಿಸಲಾಗುವದು ಎಂದರು. ಕವಿವಿ ಕುಲಸಚಿವರಾದ ಯಶಪಾಲ್ ಕ್ಷಿರಸಾಗರ ಒಪ್ಪಂದಕ್ಕೆ ಸಹಿಹಾಕಿ ಮಾತನಾಡಿ ಇಂತಹ ಶೈಕ್ಷಣಿಕ ಒಪ್ಪಂದಗಳು ವಿಶ್ವವಿದ್ಯಾಲಯಕ್ಕೆ ಚೈತನ್ಯ ನೀಡುವದಲ್ಲದೆ ಒಳ್ಳೆಯ ಶೈಕ್ಷಣಿಕ ವಾತಾವರಣ ನಿರ್ಮಿಸಲು ಸಾಧ್ಯವಾಗುತ್ತದೆ. ಇಂತಹ ಉತ್ತಮ ಕಾರ್ಯಗಳು ಭವಿಷ್ಯದಲ್ಲಿ ಇನ್ನಷ್ಟು ಆಗಬೇಕಾಗಿದೆ ಎಂದರು.

ಕವಿವಿಯ ಭೌತಶಾಸ್ತ್ರ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಡಾ. ಎಂ.ಆರ್. ಗೋರಬಾಳ ಮಾತನಾಡಿ, ಇದು ನನ್ನ ಮೊಮ್ಮಗ ಆದರ್ಶ ಪಾಟೀಲ್ ಅವರ ಕಲ್ಪನೆಯ ಕೂಸಾಗಿದ್ದು, ಅವನ ಇಚ್ಛೆಯಂತೆ ನಾನು ಸೇವೆ ಸಲ್ಲಿಸಿದ ವಿಭಾಗಕ್ಕೆ ಏನನ್ನಾದರೂ ಮಾಡಬೇಕು ಎಂಬ ತುಡಿತದಿಂದ ಈ ಒಪ್ಪಂದಕ್ಕೆ ಕಾರಣವಾಯಿತು ಎಂದ ಅವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಡಾ. ಡಿ.ಸಿ. ಪಾವಟೆ, ಮತ್ತು ಒಡೆಯರ್ ನಂತಹ ೀಮಂತ ಕುಲಪತಿಗಳು ಕವಿವಿಯನ್ನು ಕಟ್ಟಿಬೆಳೆಸಿದರು ಎಂದ ಅವರು ಡಿ.ಸಿ.ಪಾವಟೇ ಫೌಂಡೇಶನ್ ತರಹ ಈ ಡಾ. ಎಂ.ಅರ್ ಗೋರಬಾಳ ಫೌಂಡೇಶನ್ ಕೂಡ ಅನೇಕ ಶೈಕ್ಷಣಿಕ ಸಂಶೋಧನೆ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲಿದೆ ಎಂದರು.

ಈ ಸಂದರ್ಭದಲ್ಲಿ ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಆರ್. ಎಫ್ .ಭಜಂತ್ರಿ, ಡೀನ್ ಡಾ. ಬಿ. ಬಸವನಗೌಡ, ಡಾ. ಎಮ್. ಡೆವಿಡ್, ಡಾ. ಬಿ.ಎಚ್. ನಾಗೂರ, ಗೋರಬಾಳ ಫೌಂಡೇಶನ್ ಮುಖ್ಯಸ್ಥರು ಮತ್ತು ಕುಟುಂಬದ ಸದಸ್ಯರಾದ ರಮೇಶ ಗೋರಬಾಳ, ಶೋಭಾ ಗೋರಬಾಳ, ಡಿ.ಎಸ್. ಪಾಟೀಲ, ನೇತ್ರಾ ಗೋರಬಾಳ ಸೇರಿದಂತೆ ಅನೇಕ ನಿವೃತ್ತ ಪ್ರಾಧ್ಯಾಪಕರು ಸೇರಿದಂತೆ ಭೌತಶಾಸ್ತ್ರ ವಿಭಾಗದ ಪ್ರಾಧ್ಯಾಕರು ಇತರರು ಇದ್ದರು.

# ಡಾ. ಗೋರಬಾಳ ಫೌಂಡೇಶನ್ ಕವಿವಿ ಭೌತಶಾಸ್ತ್ರ ಅಧ್ಯಯನ ವಿಭಾಗ ಮಧ್ಯೆ ಒಡಂಬಡಿಕೆ

**ಧಾರವಾಡ:** ಶಿಕ್ಷಕನ ನಿವೃತ್ತಿಯ ನಂತರವೂ ಒಬ್ಬ ಶಿಕ್ಷಕ ತನ್ನ ಶಿಕ್ಷಣ ಸಂಸ್ಥೆಗೆ ಏನಾದರೂ ಮಾಡಬೇಕು ಎಂಬ ತುಡಿತ ಮತ್ತು ಆಸಕ್ತಿ ಇದ್ದಾಗ ಮಾತ್ರ ಆ ಶಿಕ್ಷಣ ಸಂಸ್ಥೆ ಹೆಮ್ಮರವಾಗಿ ಬೆಳೆಯಲು ಸಾಧ್ಯ ಎಂದು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಕೆ.ಬಿ ಗುಡಸಿ ಅಭಿಪ್ರಾಯಪಟ್ಟರು.



ಅವರು ಕರ್ನಾಟಕ ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭಾಂಗಣದಲ್ಲಿ ಡಾ. ಎಂ. ಆರ್. ಗೋರಬಾಳ ಫೌಂಡೇಶನ್ ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಭೌತಶಾಸ್ತ್ರ ಅಧ್ಯಯನ ವಿಭಾಗ ಮಧ್ಯ ಶೈಕ್ಷಣಿಕ ಚಟುವಟಿಕೆಯ ಒಡಂಬಡಿಕೆ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ಒಬ್ಬ ಶಿಕ್ಷಕ ನಿಜವಾದ ಗುಣಗಳು ಬೋಧನೆ ಮತ್ತು ಸಂಶೋಧನೆ ಆಗಿವೆ. ವಿಶ್ವವಿದ್ಯಾಲಯದಿಂದ ಅನೇಕ ಪ್ರಾಧ್ಯಾಪಕರು ನಿವೃತ್ತಿ ಆದ ನಂತರ ಸಮಾಜಕ್ಕೆ ಮತ್ತು ತಾನು ಸಲ್ಲಿಸಿದ ವಿಶ್ವವಿದ್ಯಾಲಯಕ್ಕೆ ಏನನ್ನಾದರೂ ನೀಡಬೇಕು ಎಂಬ ಭಾವನೆ ಹೊಂದಬೇಕು, ಆಗ ಮಾತ್ರ ಒಬ್ಬ ಪರಿಪೂರ್ಣವಾದ ಶಿಕ್ಷಕನಾಗಲು ಸಾಧ್ಯ ಎಂದ ಅವರು ಡಾ. ಡಿ.ಸಿ.ಪಾವಟೇ ತರಹ ಡಾ. ಎಂ.ಆರ್. ಗೋರಬಾಳ ಫೌಂಡೇಶನ್ ನಿಂದ ನೀಡುವ ನಿಧಿಯನ್ನು ಭೌತಶಾಸ್ತ್ರ ವಿಭಾಗದಲ್ಲಿ ಶೈಕ್ಷಣಿಕ ಸಂಶೋಧನಾ ಚಟುವಟಿಕೆಗಳಿಗೆ ಆದ್ಯತೆ ನೀಡಲಾಗುವದು ಎಂದರು.

ಡಾ. ಎಂ.ಆರ್. ಗೋರಬಾಳ ಫೌಂಡೇಶನ್ ಅಧ್ಯಕ್ಷ ರಮೇಶ ಗೋರಬಾಳ ಮಾತನಾಡಿ ಗೋರಬಾಳ ಫೌಂಡೇಶನ್ ವತಿಯಿಂದ 50 ಲಕ್ಷ ರೂಪಾಯಿಗಳನ್ನು ಠೇವಣಿ ಇರಿಸಿ ಅದರಿಂದ ಬರುವ ಬಡ್ಡಿ ಹಣವನ್ನು ಪ್ರತಿ ವರ್ಷ ಪ್ರತಿಭಾವಂತ ಭೌತಶಾಸ್ತ್ರ ಸಂಶೋಧನಾ ವಿದ್ಯಾರ್ಥಿ ಶಿಷ್ಯವೇತನ ನೀಡುವದು ಮತ್ತು ಭೌತಶಾಸ್ತ್ರ ವಿಭಾಗದ ಇಬ್ಬರು ಪ್ರತಿಭಾವಂತ ಅತಿಥಿ ಉಪನ್ಯಾಸಕರಿಗೆ ಉತ್ತೇಜನ ನೀಡುವ ಸಲುವಾಗಿ ಗೌರವ ಧನವನ್ನು ನೀಡುವದು ಈ ಫೌಂಡೇಶನನ ಮುಖ್ಯ ಉದ್ದೇಶವಾಗಿದೆ ಎಂದ ಅವರು ಮುಂದಿನ ದಿನಗಳಲ್ಲಿ ಡಾ. ಎಂ. ಆರ್ ಗೋರಬಾಳ ಫೌಂಡೇಶನ್ 50 ಲಕ್ಷ ದಿಂದ 1 ಕೋಟಿಯವರೆಗೆ ಈ ಠೇವಣಿಯನ್ನು ಹೆಚ್ಚಿಸಲಾಗುವದು ಎಂದರು.

ಕವಿವಿ ಕುಲಸಚಿವರಾದ ಯಶಪಾಲ್ ಕ್ಷಿರಸಾಗರ ಒಪ್ಪಂದಕ್ಕೆ ಸಹಿ ಹಾಕಿ ಮಾತನಾಡಿ ಇಂತಹ ಶೈಕ್ಷಣಿಕ ಒಪ್ಪಂದಗಳು ವಿಶ್ವವಿದ್ಯಾಲಯಕ್ಕೆ ಚೈತನ್ಯ ನೀಡುವದಲ್ಲದೆ ಒಳ್ಳೆಯ ಶೈಕ್ಷಣಿಕ ವಾತಾವರಣ ನಿರ್ಮಿಸಲು ಸಾಧ್ಯವಾಗುತ್ತದೆ. ಇಂತಹ ಉತ್ತಮ ಕಾರ್ಯಗಳು ಭವಿಷ್ಯದಲ್ಲಿ ಇನ್ನಷ್ಟು ಆಗಬೇಕಾಗಿದೆ ಎಂದರು.

ಕವಿವಿಯ ಭೌತಶಾಸ್ತ್ರ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಡಾ. ಎಂ.ಆರ್. ಗೋರಬಾಳ ಮಾತನಾಡಿ ಇದು ನನ್ನ ಮೊಮ್ಮಗ ಆದರ್ಶ ಪಾಟೀಲ್ ಅವರ ಕಲ್ಪನೆಯ ಕೂಸಾಗಿದ್ದು, ಅವನ ಇಚ್ಛೆಯಂತೆ ನಾನು ಸೇವೆ ಸಲ್ಲಿಸಿದ ವಿಭಾಗಕ್ಕೆ ಏನನ್ನಾದರೂ ಮಾಡಬೇಕು ಎಂಬ ತುಡಿತದಿಂದ ಈ ಒಪ್ಪಂದಕ್ಕೆ ಕಾರಣವಾಯಿತು ಎಂದ ಅವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಡಾ. ಡಿ.ಸಿ. ಪಾವಟೆ, ಮತ್ತು ಒಡೆಯರ್ ನಂತಹ ಧೀಮಂತ ಕುಲಪತಿಗಳು ಕವಿವಿಯನ್ನು ಕಟ್ಟಿಬೆಳೆಸಿದರು ಎಂದ ಅವರು ಡಿ.ಸಿ.ಪಾವಟೇ ಫೌಂಡೇಶನ್ ತರಹ ಈ ಡಾ. ಎಂ.ಆರ್ ಗೋರಬಾಳ ಫೌಂಡೇಶನ್ ಕೂಡ ಅನೇಕ ಶೈಕ್ಷಣಿಕ ಸಂಶೋಧನೆ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲಿದೆ ಎಂದರು.

ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಆರ್. ಎಫ್ ಭಜಂತ್ರಿ, ವಿಜ್ಞಾನ ನಿಕಾಯದ ಡೀನ್ ಡಾ. ಬಿ.ಬಸವನಗೌಡ, ಡಾ. ಎಮ್. ಡೇವಿಡ್, ಡಾ. ಬಿ.ಎಚ್. ನಾಗೂರ, ಗೋರಬಾಳ ಫೌಂಡೇಶನ್ ಮುಖ್ಯಸ್ಥರು ಮತ್ತು ಕುಟುಂಬದ ಸದಸ್ಯರಾದ ರಮೇಶ ಗೋರಬಾಳ, ಶೋಭಾ ಗೋರಬಾಳ, ಡಿ.ಎಸ್. ಪಾಟೀಲ, ನೇತ್ರಾ ಗೋರಬಾಳ ಸೇರಿದಂತೆ ಅನೇಕ ನಿವೃತ್ತ ಪ್ರಾಧ್ಯಾಪಕರು ಸೇರಿದಂತೆ ಭೌತಶಾಸ್ತ್ರ ವಿಭಾಗದ ಪ್ರಾಧ್ಯಾಕರು ಇತರರು ಇದ್ದರು.



## ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಗುರಿ ಇರಲಿ

## ಕಾನೂನು ವಿವಿ ವಿದ್ಯಾರ್ಥಿ ಸಂಸದ ಉದ್ಘಾಟನೆ

# ಕವಿವಿಗೆ ಗೋರಬಾಳ ಫೌಂಡೇಶನ್ ₹ 50 ಲಕ್ಷ ಠೇವಣಿ

KP



ಡಾ. ಎಂ.ಆರ್. ಗೋರಬಾಳ ಫೌಂಡೇಶನ್ ಮತ್ತು ಕರ್ನಾಟಕ ವಿಶ್ವವಿದ್ಯಾಲಯದ ಭೌತಶಾಸ್ತ್ರ ಅಧ್ಯಯನ ವಿಭಾಗ ಮಧ್ಯೆ ಶೈಕ್ಷಣಿಕ ಚಟುವಟಿಕೆಯ ಒಡಂಬಡಿಕೆ ಮಾಡಿಕೊಳ್ಳಲಾಯಿತು.

• **ಕನ್ನಡಪ್ರಭ ವಾರ್ತೆ** ಧಾರವಾಡ

ಡಾ. ಎಂ.ಆರ್. ಗೋರಬಾಳ ಫೌಂಡೇಶನ್ ವತಿಯಿಂದ ಕರ್ನಾಟಕ ವಿಶ್ವವಿದ್ಯಾಲಯದ ಭೌತಶಾಸ್ತ್ರ ವಿಭಾಗಕ್ಕೆ ₹ 50 ಲಕ್ಷ ಠೇವಣಿ ಇಡಲಾಯಿತು.

ವಿವಿಯ ಸಿಂಡಿಕೇಟ್ ಸಭಾಂಗಣದಲ್ಲಿ ಡಾ. ಎಂ. ಆರ್. ಗೋರಬಾಳ ಫೌಂಡೇಶನ್ ಮತ್ತು ವಿಶ್ವವಿದ್ಯಾಲಯದ ಭೌತಶಾಸ್ತ್ರ ಅಧ್ಯಯನ ವಿಭಾಗ ಮಧ್ಯೆ ಶೈಕ್ಷಣಿಕ ಚಟುವಟಿಕೆಯ ಒಡಂಬಡಿಕೆ ನಡೆಯಿತು.

ಈ ವೇಳೆ ಮಾತನಾಡಿದ ಕುಲಪತಿ ಪ್ರೊ. ಕೆ.ಬಿ ಗುಡಸಿ, ಒಬ್ಬ ಶಿಕ್ಷಕನ ನಿಜವಾದ ಗುಣಗಳು ಬೋಧನೆ ಹಾಗೂ ಸಂಶೋಧನೆ. ವಿಶ್ವವಿದ್ಯಾಲಯದಿಂದ ಅನೇಕ ಪ್ರಾಧ್ಯಾಪಕರು ನಿವೃತ್ತಿ ಆದ ನಂತರ ಸಮಾಜಕ್ಕೆ ಮತ್ತು ತಾನು ಸಲ್ಲಿಸಿದ ವಿಶ್ವವಿದ್ಯಾಲಯಕ್ಕೆ ಏನನ್ನಾದರೂ ಕೊಡುಗೆ ನೀಡಬೇಕು ಎಂಬ ಭಾವನೆ ಹೊಂದಬೇಕು. ಆಗ ಮಾತ್ರ ಒಬ್ಬ ಪರಿಪೂರ್ಣವಾದ ಶಿಕ್ಷಕನಾಗಲು ಸಾಧ್ಯ. ಡಾ. ಡಿ.ಸಿ. ಪಾವಟೆ ತರಹ ಡಾ. ಎಂ.ಆರ್. ಗೋರಬಾಳ ಫೌಂಡೇಶನ್‌ನಿಂದ ನೀಡುವ ನಿಧಿಯನ್ನು ಭೌತಶಾಸ್ತ್ರ ವಿಭಾಗದಲ್ಲಿ ಶೈಕ್ಷಣಿಕ ಸಂಶೋಧನಾ ಚಟುವಟಿಕೆ ನಡೆಸಲು ಆದ್ಯತೆ ನೀಡಲಾಗುವುದು ಎಂದರು.

ಡಾ. ಎಂ.ಆರ್. ಗೋರಬಾಳ ಫೌಂಡೇಶನ್ ಅಧ್ಯಕ್ಷ ರಮೇಶ ಗೋರಬಾಳ ಮಾತನಾಡಿ, ಫೌಂಡೇಶನ್ ವತಿಯಿಂದ ₹ 50 ಲಕ್ಷ ಠೇವಣಿ ಇರಿಸಿ ಅದರಿಂದ ಬರುವ ಬಡ್ಡಿ ಹಣವನ್ನು ಪ್ರತಿ ವರ್ಷ ಪ್ರತಿಭಾವಂತ ಭೌತಶಾಸ್ತ್ರ ಸಂಶೋಧನಾ ವಿದ್ಯಾರ್ಥಿ ಶಿಷ್ಯವೇತನ ನೀಡುವುದು ಮತ್ತು ಭೌತಶಾಸ್ತ್ರ ವಿಭಾಗದ ಇಬ್ಬರು ಪ್ರತಿಭಾವಂತ ಅತಿಥಿ ಉಪನ್ಯಾಸಕರಿಗೆ ಉತ್ತೇಜನ ನೀಡುವ ಸಲುವಾಗಿ ಗೌರವ ಧನ ನೀಡುವುದು ಫೌಂಡೇಶನನ ಮುಖ್ಯ ಉದ್ದೇಶ. ಬರುವ ದಿನಗಳಲ್ಲಿ ಠೇವಣಿಯನ್ನು ₹ 50 ಲಕ್ಷದಿಂದ ₹ 1 ಕೋಟಿಗೆ ಹೆಚ್ಚಿಸಲಾಗುವುದು ಎಂದರು.

ಕವಿವಿ ಕುಲಸಚಿವ ಯಶಪಾಲ್ ಕ್ಷೀರಸಾಗರ ಒಪ್ಪಂದಕ್ಕೆ ಸಹಿ ಹಾಕಿದರು. ಕವಿವಿಯ ಭೌತಶಾಸ್ತ್ರ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಡಾ. ಎಂ.ಆರ್. ಗೋರಬಾಳ ಮಾತನಾಡಿ, ಈ ಯೋಜನೆ ಮೊಮ್ಮಗ ಆದರ್ಶ ಪಾಟೀಲ್ ಕಲ್ಪನೆಯ ಕೂಸು. ಅವನ ಇಚ್ಛೆಯಂತೆ ಸೇವೆ ಸಲ್ಲಿಸಿದ ವಿಭಾಗಕ್ಕೆ ಈ ಸೇವೆ ಮಾಡಲಾಗುತ್ತಿದೆ ಎಂದರು. ಭೌತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಆರ್.ಎಫ್. ಭಜಂತ್ರಿ, ವಿಜ್ಞಾನ ನಿಖಾಯದ ಡೀನ್ ಡಾ. ಬಿ. ಬಸವನಗೌಡ, ಡಾ. ಎಂ. ಡೇವಿಡ್, ಡಾ. ಬಿ.ಎಚ್. ನಾಗೂರ ಇದ್ದರು.